# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | :: 973 |
| ಸದಸ್ಯರ ಹೆಸರು | :: ಶ್ರೀ ರಾಜೇಂದ್ರ ರಾಜಣ್ಣ |
| ಉತ್ತರಿಸುವ ದಿನಾಂಕ | :: 21.09.2022 |
| ಉತ್ತರಿಸುವ ಸಚಿವರು | :: ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆಯಲ್ಲಿ ಭೂ ಕಬಳಿಕೆ ಮತ್ತು ಅಕ್ರಮ ಖಾತೆ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | -ಸರ್ಕಾರದ ಗಮನಕ್ಕೆ ಬಂದಿದೆ- |
| ಆ) | ಬಂದಿದ್ದಲ್ಲಿ, ಎಷ್ಟು ಎಕರೆಗಳು ಸರ್ಕಾರಿ ಜಮೀನನ್ನು (ಗೋಮಾಳ) ಭೂ ಕಬಳಿಕೆ ಮತ್ತು ಅಕ್ರಮ ಖಾತೆ ಪ್ರಕರಣದಲ್ಲಿ ಖಾಸಗಿ ವ್ಯಕ್ತಿಗಳ ಹೆಸರಿಗೆ ಮಂಜೂರಾಗಿದೆ; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರಿ ಜಮೀನನ್ನು (ಗೋಮಾಳ) ಭೂ ಕಬಳಿಕೆ ಮಾಡಿರುವ ಒಟ್ಟು ವಿಸ್ತೀರ್ಣ 1100-14 ಎಕರೆ/ಗುಂಟೆ ಆಗಿರುತ್ತದೆ ಮತ್ತು ಅಕ್ರಮ ಖಾತೆ ಪ್ರಕರಣದಲ್ಲಿ ಖಾಸಗಿ ವ್ಯಕ್ತಿಗಳ ಹೆಸರಿಗೆ ಒಟ್ಟು ವಿಸ್ತೀರ್ಣ 1143-00 ಎಕರೆ/ಗುಂಟೆ ಜಮೀನು ಮಂಜೂರಾಗಿರುತ್ತದೆ. (ತಾಲ್ಲೂಕುವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ). |
| ಇ) | ಸರ್ಕಾರಿ ಜಮೀನುಗಳಿಗೆ (ಗೋಮಾಳ) ಅಕ್ರಮ ಖಾತೆ ಪ್ರಕರಣದಲ್ಲಿ ಭಾಗಿಯಾಗಿರುವವರ ವಿರುದ್ಧ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ; ತನಿಖೆ ಯಾವ ಹಂತದಲ್ಲಿದೆ; | **<u>ಗೋಮಾಳ ಭೂ ಕಬಳಿಕೆ ಪ್ರಕರಣಗಳ ವಿವರ</u>**<br>1. ಗುಬ್ಬಿ ತಾಲ್ಲೂಕಿನಲ್ಲಿ ಗೋಮಾಳ ಭೂ ಕಬಳಿಕೆ ಪ್ರಕರಣಗಳ ಸಂಖ್ಯೆ 347, ವಿಸ್ತೀರ್ಣ 947-07 ಎಕರೆ/ಗುಂಟೆ ಜಮೀನಿನ ದಾಖಲೆಗಳಲ್ಲಿ ಅಕ್ರಮವಾಗಿ ಹೆಸರನ್ನು ಸೇರಿಸಲಾಗಿರುವ ಸಂಬಂಧ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಐಪಿಸಿ ಕಾಯ್ದೆ 1860 ರ ಕಲಂ 406, 408, 409, 420, 465, 468, 34ರಲ್ಲಿ ಅಪರಾಧ ಸಂಖ್ಯೆ 157/2022 ರಂತೆ ಪ್ರಕರಣ ದಾಖಲಾಗಿದ್ದು, ಈ ಪ್ರಕರಣದಲ್ಲಿ 07 ಜನ ಸರ್ಕಾರಿ ನೌಕರರು, ಒಬ್ಬ ಗ್ರಾಮ ಸಹಾಯಕ, ಒಬ್ಬ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದ ಜಿಲ್ಲಾ ಸಮಾಲೋಚಕ ಹಾಗೂ 09 ಜನ ಖಾಸಗಿ ವ್ಯಕ್ತಿಗಳನ್ನು ಪೊಲೀಸ್ ಇಲಾಖೆಯು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನದಲ್ಲಿರಿಸಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.<br>2. ತಿಪಟೂರು ತಾಲ್ಲೂಕು, ಹೊನ್ನವಳ್ಳಿ ಹೋಬಳಿ, ದೊಡ್ಡಿಕಟ್ಟೆ ಗ್ರಾಮದ ಸರ್ವೆ ನಂ. 6, 07, 09 ರ ಅಮೃತ್ ಮಹಲ್ ಕಾವಲ್ ಜಮೀನಿನಲ್ಲಿ 21 |

| | | |
|---|---|---|
| | | ಜನರು ವಿಸ್ತೀರ್ಣ 61-22 ಎಕರೆ/ಗುಂಟೆ ಒತ್ತುವರಿ ಮಾಡಿದ್ದು, ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಕ್ಕೆ ಪ್ರಕರಣ ದಾಖಲಾಗಿದ್ದು, ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ.<br>3. ಶಿರಾ ತಾಲ್ಲೂಕಿನಲ್ಲಿ 19 ಗೋಮಾಳ ಭೂ ಕಬಳಿಕೆ ಪ್ರಕರಣಗಳಿದ್ದು ವಿಸ್ತೀರ್ಣ 91-25 ಎಕರೆ/ಗುಂಟೆ ಜಮೀನು ಒತ್ತುವರಿಯಾಗಿದ್ದು, ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಕ್ಕೆ ಪ್ರಕರಣ ದಾಖಲಾಗಿದ್ದು ವಿಚಾರಣೆ ಹಂತದಲ್ಲಿರುತ್ತದೆ.<br><br>**<u>ಅಕ್ರಮ ಖಾತೆ ಪ್ರಕರಣಗಳಲ್ಲಿ ಖಾಸಗಿ ವ್ಯಕ್ತಿಗಳಿಗೆ ಮಂಜೂರಾತಿ ವಿವರ</u>**<br>1. ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ, ದೊಡ್ಡ ಅಗ್ರಹಾರದ ಸ.ನಂ.260ರಲ್ಲಿ ವಿಸ್ತೀರ್ಣ 3-00 ಎಕರೆ ಅಕ್ರಮ ಖಾತೆಯಾಗಿದ್ದು ಕಳ್ಳಂಬೆಳ್ಳ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು ತನಿಖಾ ಹಂತದಲ್ಲಿರುತ್ತದೆ.<br>2. ಮಧುಗಿರಿ ತಾಲ್ಲೂಕು, ದೊಡ್ಡೇರಿ ಹೋಬಳಿ ಎ.ಎಂ. ಕಾವಲ್ ಗ್ರಾಮದಲ್ಲಿ 94 ಜನರಿಗೆ ವಿಸ್ತೀರ್ಣ 1140-00 ಎಕರೆ/ಗುಂಟೆ ಜಮೀನನ್ನು ಅಕ್ರಮವಾಗಿ ಖಾತೆ ಮಾಡಲಾಗಿದ್ದು ಒಟ್ಟು 17ನೌಕರರ ವಿರುದ್ಧ ಇಲಾಖಾ ವಿಚಾರಣಾ ಪ್ರಕರಣ ದಾಖಲಾಗಿದ್ದು ವಿಚಾರಣೆ ಹಂತದಲ್ಲಿರುತ್ತದೆ. |
| ಈ) | ಭೂ ಕಬಳಿಕೆ ಮತ್ತು ಅಕ್ರಮ ಖಾತೆ ವರ್ಗಾವಣೆ ಪ್ರಕರಣಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ಕಾರ್ಯ ಪಡೆಗಳನ್ನು ರಚಿಸಲಾಗಿದ್ದು, ಅದರಂತೆ ಎಲ್ಲಾ ಜಿಲ್ಲಾಧಿಕಾರಿಗಳು ಕಾಲಬದ್ಧ ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡಿದ್ದು, ಒತ್ತುವರಿ ಆಗಿರುವ ಸರ್ಕಾರಿ ಜಮೀನುಗಳನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ.<br><br>ಸರ್ಕಾರಿ ಜಮೀನಿನ ಒತ್ತುವರಿ ಪ್ರಕರಣಗಳನ್ನು ಸಮರ್ಥವಾಗಿ ತಡೆಯುವ ಸಲುವಾಗಿ **ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವನ್ನು ರಚಿಸಲಾಗಿದೆ.** |

| | | |
|---|---|---|
| | | ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 192ಎ ರನ್ವಯ ಪ್ರಕರಣವನ್ನು ದಾಖಲಿಸಲಾಗುತ್ತಿದೆ.<br><br>ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 20 ಎಲ್‌ಜಿಪಿ 2020, ದಿನಾಂಕ:20.01.2020ರಂತೆ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವುದು, ಒತ್ತುವರಿದಾರರ ವಿರುದ್ಧ ಕ್ರಮ ಜರುಗಿಸುವುದು, ಒತ್ತುವರಿ ತೆರವುಗೊಳಿಸಲು ವಿಫಲರಾಗಿರುವ ಅಧಿಕಾರಿಗಳು/ಭೂ ಕಬಳಿಕೆಗೆ ಪ್ರೇರಣೆ ನೀಡಲು, ನಕಲಿ ದಾಖಲೆಗಳನ್ನು ಸೃಷ್ಟಿಸಲು ಸಹಕರಿಸಿ ಶಾಮೀಲಾಗಿರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕಾನೂನು/ಶಿಸ್ತು ಕ್ರಮಗಳನ್ನು ಜರುಗಿಸಲು ಸೂಚನೆ ನೀಡಲಾಗಿದೆ.<br><br>ಸರ್ಕಾರಿ ಜಮೀನುಗಳಲ್ಲಿ ಆಗುವಂತಹ ಒತ್ತುವರಿ ಗುರುತಿಸಲು ಮತ್ತು ನಿಗಾವಹಿಸಲು ಸರ್ಕಾರವು ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿಯನ್ನು ರಚನೆ ಮಾಡಿದ್ದು, ಸದನ ಸಮಿತಿಯು ಪ್ರತಿ ವಾರವು ಸಭೆಗಳನ್ನು ನಡೆಸುತ್ತಿದ್ದು, ಸಮಿತಿಯ ಸಲಹೆ ಸೂಚನೆಗಳಂತೆ ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಕಂಇ 90 ಎಲ್‌ಜಿಟಿ 2022**

**(ಆರ್. ಅಶೋಕ)**
**ಕಂದಾಯ ಸಚಿವರು**

# ಅನುಬಂಧ

## ತುಮಕೂರು ಜಿಲ್ಲೆಯಲ್ಲಿ ಸರ್ಕಾರಿ ಜಮೀನನ್ನು (ಗೋಮಾಳ) ಭೂ ಕಬಳಿಕೆ ಮಾಡಿರುವ ಮತ್ತು ಅಕ್ರಮ ಖಾತೆ ಪ್ರಕರಣದಲ್ಲಿ ಖಾಸಗಿ ವ್ಯಕ್ತಿಗಳ ಹೆಸರಿಗೆ ಮಂಜೂರಾಗಿರುವ ಜಮೀನಿನ ವಿವರಗಳು

| ಗೋಮಾಳ ಭೂ ಕಬಳಿಕೆ ಪ್ರಕರಣಗಳ ವಿವರ | | | | ಅಕ್ರಮ ಖಾತೆ ಪ್ರಕರಣಗಳಲ್ಲಿ ಖಾಸಗಿ ವ್ಯಕ್ತಿಗಳಿಗೆ ಮಂಜೂರಾತಿ ವಿವರ | | | |
|---|---|---|---|---|---|---|---|
| ಕ್ರ.ಸಂ | ತಾಲ್ಲೂಕು | ಸಂಖ್ಯೆ | ವಿಸ್ತೀರ್ಣ ಎ/ಗು | ಕ್ರ.ಸಂ | ತಾಲ್ಲೂಕು | ಸಂಖ್ಯೆ | ವಿಸ್ತೀರ್ಣ ಎ/ಗು |
| 1. | ತುಮಕೂರು. | – | – | 1. | ತುಮಕೂರು. | – | – |
| 2. | ಗುಬ್ಬಿ. | 347 | 947–07 | 2. | ಗುಬ್ಬಿ. | – | – |
| 3. | ಕುಣಿಗಲ್. | – | – | 3. | ಕುಣಿಗಲ್. | – | – |
| 4. | ತಿಪಟೂರು. | 21 | 61–22 | 4. | ತಿಪಟೂರು. | – | – |
| 5. | ಚಿ.ನಾ.ಹಳ್ಳಿ. | – | – | 5. | ಚಿ.ನಾ.ಹಳ್ಳಿ. | – | – |
| 6. | ತುರುವೇಕೆರೆ. | – | – | 6. | ತುರುವೇಕೆರೆ. | – | – |
| 7. | ಶಿರಾ. | 19 | 91–25 | 7. | ಶಿರಾ. | 01 | 3–00 |
| 8. | ಮಧುಗಿರಿ. | – | – | 8. | ಮಧುಗಿರಿ. | 94 | 1140–00 |
| 9. | ಕೊರಟಗೆರೆ. | – | – | 9. | ಕೊರಟಗೆರೆ. | – | – |
| 10. | ಪಾವಗಡ. | – | – | 10. | ಪಾವಗಡ. | – | – |
| | ಒಟ್ಟು | **387** | **1100–14** | | ಒಟ್ಟು | **95** | **1143–00** |